

ಪುಡಿ, ಇನ್ನು ಸ್ನಾನ ಮಾಡಲು ಇದೆಯಲ್ಲ ವಿಶಾಲ ಬಾವಿ. ಆಗಲೇ ಚೆಡ್ಡಿಯ ಮೇಲಿರುತ್ತಿದ್ದ ನಾವು, ಯಾರ ಹಂಗಿಲ್ಲದೆ ಮೇಲಿಂದಲೇ ಜಿಗಿದು, ಈಜುತ್ತಲೇ ಬಾಯಿ ಮುಕ್ಕಳಿಸುತ್ತಿದ್ದೆವು ಅದೆಂಥಾ ಮೋಕಳೀಕು!

ಹೈಸ್ಕೂಲಿನ ದಿನಗಳಲ್ಲಿ, ಹಾಗೆ ಕಂಚಿನಂತೆ ಫಳ ಫಳ ಹೊಳೆಯುತ್ತಿದ್ದ ನಮ್ಮ ಹಲ್ಲುಗಳನ್ನು ನೋಡಿ, ಮೇಲ್ವರ್ಗದ ಸಹಪಾಠಿ ಹುಡುಗಿಯರು 'ನೀವು ಯಾವ ಪೇಸ್ಟು ಬಳಸುವುದು' ಎಂದು ಕೇಳುತ್ತಿದ್ದರು. ನಾವಾಗ, 'ಹಿಟ್ಟಗಲ್ ಪೇಸ್ಟು' ಎಂದು ಒಗಟಿನಂತೆ ಉತ್ತರಿಸುತ್ತಿದ್ದೆವು. ಅವರಿಗದು ಅರ್ಥವಾಗದೆ 'ಅದ್ಯಾವ ಕಂಪನಿ' ಎಂದು ತಿರಗಾ ಅಲವತ್ತುಕೊಂಡಾಗ, 'ಅದು ಲೋಕಲ್ ಬ್ರ್ಯಾಂಡ್' ಎಂದು ಜಂಭದಿಂದ ಹೇಳಿ ಬಾಯಿ ಮುಚ್ಚಿಸುತ್ತಿದ್ದೆವೇ ಹೊರತು, ಒಡೆದು ಹೇಳಲು ಹೋಗುತ್ತಿದ್ದಿಲ್ಲ.

ನಮ್ಮೂರಿನಲ್ಲಿ ಹಲ್ಲುಗಳೆಲ್ಲ ಉದುರಿ, ಬಾಯಿ ಬೊಚ್ಚಾದವರು ಬಾಯಿರುಚಿ ಮಾತ್ರವಲ್ಲ, ಬದುಕಿನ ರುಚಿಯೂ ಕಳೆದುಕೊಂಡವರಂತೆ ಪೇಚಾಡುತ್ತಿದ್ದರು, ಪಾಪ!

ಹಲ್ಲು ಹಲ್ಲೆಂದೇತಕೆ ಬೀಳುಗಳೆಯುವಿರಿ
ಕಲ್ಲು ಮನದ ಗಾವಿಲರೆ!
ಹಲ್ಲಲ್ಲವೆ ನಮ್ಮ ಆರೋಗ್ಯ ಕಾಯುವ ಸೈನ್ಯ
ಹಲ್ಲೇ ಮುಖದ ಸೌಂದರ್ಯ!

ವಾಹ್! ನಾನೊಬ್ಬ ಅಣಕು ಕವಿಯಾದೆ, ಸಂಚಿಯ ಹೊನ್ನಮ್ಮನನ್ನು ನೆನೆದು.

ಆಗಲೇ ಹೇಳಿದಂತೆ, ಈಜು ಬಾವಿಗೆ ಹಾಗೆ ನಿತ್ಯ ಹೋಗುವಾಗ, ದಾರಿಯಲ್ಲಿ ಮುರಿದ ಕಡ್ಡಿ ಬ್ರಶ್‌ನಿಂದ ಹಲ್ಲು ಉಜ್ಜಿ, ನಂತರ ಅದೇ ಕಡ್ಡಿಯನ್ನು ಸೀಳಿ ಬಿಲ್ಲಿನಂತೆ ಬಗ್ಗಿಸಿ ನಾಲಿಗೆಯನ್ನು ಕೆರೆಯುತ್ತಿದ್ದೆವು – 'ಟೂ ಇನ್ ಒನ್' ಸೌಕರ್ಯ! ಬಾಲ್ಯದಲ್ಲಿ ನಮಗೆ ಮನೆಯ ಬಚ್ಚಲಲ್ಲಿ ಜಳಕ ಮಾಡಿದ ನೆನಪೇ ಇಲ್ಲ. ಏನಿದ್ದರೂ ಊರ ಸುತ್ತಲೂ ಇದ್ದ ತೋಟದ ಈಜುಬಾವಿಯ ಸ್ನಾನ. ಅಂಥ ಕಡೆ ಕೆಲವೊಮ್ಮೆ ದನ ಕಾಯುವ ಹುಡುಗರು ಬದಲಾಯಿಸಲು